For more information visit
University Library Website
Web - uasbagrilibindia.org
E-mail- librarian@uasbangalore.edu.in

ಹೈಬ್ರಿಡ್ ಜಪಕ್ಕೆ ಜವಾರಿ ಸವಾಲು

ಬೀಜ ಬ್ಯಾಂಕ್ ಸ್ಥಾಪನೆಯಂಥ ವಿಶಿಷ್ಟ ಪ್ರಯೋಗಗಳ ಮೂಲಕ ದೇಸಿ ತಳಿಗಳಿಗೆ ವ್ಯವಸ್ಥಿತ ಚೌಕಟ್ಟು ರೂಪಿಸಿ ರೈತರಲ್ಲಿ ಆತ್ಮವಿಶ್ವಾಸ ಮೂಡಿಸಬೇಕಾಗಿದೆ

• ಆನಂದತೀರ್ಥ ಪ್ಯಾಟಿ

ಹವಾಮಾನ ಬದಲಾವಣೆ ತಂದೊಡ್ಡಿರುವ ಬಿಕ್ಕಟ್ಟು ಎಲ್ಲ ಕ್ಷೇತ್ರಗಳಂತೆ ನಿಧಾನವಾಗಿ ಕೃಷಿ ವಲಯವನ್ನೂ ಆವರಿಸಿಕೊಳ್ಳುತ್ತಿದೆ. ವಾಸ್ತವವಾಗಿ ಈ ಪಿಡುಗಿನಿಂದ ಹೆಚ್ಚು ಹಾನಿ ಅನುಭವಿಸುತ್ತಿರುವವರು ರೈತರೇ. ಬಿರುಬೇಸಿಗೆಯಲ್ಲೂ ಧಾರಾಕಾರ ಮಳೆ, ಮಳೆಗಾಲದಲ್ಲಿ ಬಿರುಬಿಸಿಲು ಕೃಷಿಕರನ್ನು ಹೈರಾಣ ಮಾಡಿವೆ. ಕುತೂಹಲದ ವಿಷಯವೆಂದರೆ, ಪ್ರಾಕೃತಿಕ ಏರುಪೇರಿನ ಹಂಗಾಮುಗಳಲ್ಲಿ ತಕ್ಕಮಟ್ಟಿಗೆ ಇಳುವರಿ ಕೊಡುತ್ತಿರುವುದು ದೇಸಿ ತಳಿಗಳೇ ಆಗಿವೆ!

ಅಧಿಕ ಇಳುವರಿಯ ತಳಿಗಳು ಕೃಷಿ ಕ್ಷೇತ್ರಕ್ಕೆ ಕಾಲಿಟ್ಟ ಕೆಲವೇ ದಶಕಗಳಲ್ಲಿ ಸಾಂಪ್ರದಾಯಿಕ ತಳಿಗಳು ಹೊಲ-ಗದ್ದೆಗಳಿಂದ ಕಾಣೆಯಾದವು. ಸಾವಿರಾರು ವರ್ಷಗಳಿಂದ ಆಯಾ ವಾತಾವರಣಕ್ಕೆ ಹೊಂದಿಕೊಂಡು ಬೆಳೆಯುತ್ತಿದ್ದ ಜವಾರಿ ತಳಿಗಳು, ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಟ ನಡೆಸಬೇಕಾಯಿತು. ಹೆಚ್ಚು ಇಳುವರಿ ಕೊಡುವ ತಳಿಗಳನ್ನು ರೈತರು ಹೆಚ್ಚೆಚ್ಚು ಅವಲಂಬಿಸಿದ್ದರಿಂದ, ಜವಾರಿ ತಳಿಗಳು ಅಸಕ್ತರ ಹೊಲದಲ್ಲಷ್ಟೇ 'ಜೀವ' ಉಳಿಸಿಕೊಂಡವು.

ಇಂಥ ಸಾಂಪ್ರದಾಯಿಕ ತಳಿಗಳ ಬಿತ್ತನೆ ಬೀಜಗಳನ್ನು ಉಳಿಸಿ, ಬೆಳೆಸುತ್ತಿರುವುದೇ ನಾಡಿನಾದ್ಯಂತ ಅಲ್ಲಲ್ಲಿ ಚದುರಿದಂತೆ ಇರುವ ಸಾವಯವ ಕೃಷಿಕರು. ತಳಿ ಸಂರಕ್ಷಣೆಯನ್ನು ಜತನದಿಂದ ನಿರ್ವಹಿಸುತ್ತ, ಒಂದೊಂದು ಬೆಳೆಯಲ್ಲೂ ಹತ್ತಾರು ತಳಿಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ರವಾನಿಸುತ್ತಿದ್ದಾರೆ. ಇಂಥವರ ಜವಾರಿ ಪ್ರೀತಿಯಿಂದಾಗಿಯೇ ಒಂದೊಂದು ಬೆಳೆಯಲ್ಲೂ ಹತ್ತಾರು, ನೂರಾರು ತಳಿಗಳು ಈವರೆಗೆ ಉಳಿದಿವೆ. ಪ್ರಾದೇಶಿಕ ಮಟ್ಟದಲ್ಲಿ ಆಸಕ್ತ ರೈತರಿಗೆ ದೇಸಿ ಬೀಜಗಳನ್ನು ಒದಗಿಸಿ, ತಳಿ ಸಂರಕ್ಷಣೆ ಮಾಡುವ ಕೆಲಸವನ್ನು ಸಮುದಾಯ ಬೀಜ ಬ್ಯಾಂಕುಗಳು ನಿರ್ವಹಿಸುತ್ತಿವೆ. ಅದರಲ್ಲೂ ಮಹಿಳಾ ಸಂಘಗಳ ಪಾತ್ರ ಇಲ್ಲಿ ಗಮನಾರ್ಹ. ತಳಿ ಆಯ್ಕೆ, ಬೀಜೋತ್ಪಾದನೆ, ಶುದ್ಧತೆ, ಪ್ಯಾಕಿಂಗ್ ಹಾಗೂ ವಿತರಣೆಯನ್ನು ಮಹಿಳಾ ಸಂಘಗಳು ಯಶಸ್ವಿಯಾಗಿ ಮಾಡುತ್ತಿವೆ.

ಈವರೆಗೆ ಹೈಬ್ರಿಡ್ ತಳಿಗಳ 'ಜಪ' ಮಾಡುತ್ತಿದ್ದ ಆಧುನಿಕ ಕೃಷಿ ವಿಜ್ಞಾನದ ಗಮನ ದೇಸಿ ತಳಿಗಳತ್ತ ಹರಿಯುತ್ತಿದೆ. ಸಾಂಪ್ರದಾಯಿಕ ತಳಿಗಳ ತಾಕತ್ತು ಗಮನಿಸಿದರೆ, ಅವುಗಳನ್ನು ರೈತ ಸಮುದಾಯ ಹೊಗಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕೃಷಿ ಸಂಘಟನೆಗಳ ಒತ್ತಾಸೆ, ಸಾವಯವ ಕೃಷಿಕರ ಮನವಿಯ ಪರಿಣಾಮವಾಗಿ, ಕರ್ನಾಟಕ ಸರ್ಕಾರವು ಹೋದ ವರ್ಷ ಸಮುದಾಯ ಬೀಜ ಬ್ಯಾಂಕ್ ಸ್ಥಾಪನೆಗೆ ₹ 5 ಕೋಟಿಯನ್ನು ಬಜೆಟ್‌ನಲ್ಲಿ ಮೀಸಲಿಟ್ಟಿರುವುದು ಶ್ಲಾಘನೀಯ.

ಸರ್ಕಾರದ ಮಟ್ಟದಲ್ಲಿ ಯೋಜನೆಯೊಂದಕ್ಕೆ ಹಣ ಕಾಯ್ದಿಡಲಾಗಿದೆ ಎಂದರೆ, ಅದನ್ನು ವೆಚ್ಚ ಮಾಡಲು ಹತ್ತಾರು ದಾರಿಗಳು ತನ್ನಿಂತಾನೇ ತೆರೆದುಕೊಳ್ಳುತ್ತವೆ. ಆ ಕಾರಣದಿಂದ ಸಮುದಾಯ ಬೀಜ ಬ್ಯಾಂಕಿಗೆ ಮೀಸಲಿಟ್ಟ ₹ 5 ಕೋಟಿ ಹೇಗೆಲ್ಲ 'ಖರ್ಚಾಗುತ್ತದೆ' ಎಂಬುದು ಮುಖ್ಯವಾಗುತ್ತದೆ. ಎರಡು ವರ್ಷಗಳ ಹಿಂದೆ ಪೈಸರ್ಗಿಕ ಕೃಷಿಗೆ ಮೀಸಲಿಟ್ಟಿದ್ದ ಮೊತ್ತವನ್ನು ಹೇಗೆ ವೆಚ್ಚ ಮಾಡಲಾಯಿತು ಎಂಬುದನ್ನೊಮ್ಮೆ ಪರಿಶೀಲಿಸಬೇಕು.

ಈವರೆಗೆ ತಳಿ ಸಂರಕ್ಷಣೆಯಲ್ಲಿ ಶ್ರಮಿಸಿದ ಬೀಜಮಾತೆಯರು, ಮಹಿಳಾ ಸಂಘಗಳು ಹಾಗೂ ಸಾವಯವ ಕೃಷಿಕರನ್ನು ಗುರುತಿಸಿ, ಈ ಯೋಜನೆಯಲ್ಲಿ ಒಳಗೊಳ್ಳುವಂತೆ ಮಾಡಬೇಕು. ದೇಸಿ ಬೀಜಗಳನ್ನು ವಾಣಿಜ್ಯ ಮಟ್ಟದಲ್ಲಿ ರೈತರಿಗೆ ಉತ್ಪಾದಿಸಿ ಕೊಡುತ್ತಿರುವ 'ರೈತ ಉತ್ಪಾದಕ ಕಂಪನಿ'ಗಳೂ ಈ ಯೋಜನೆಯಲ್ಲಿ ಪಾಲುದಾರಿಕೆ ಹೊಂದಬೇಕು. ಹೈಬ್ರಿಡ್ ತಳಿಗಷ್ಟೇ ಆದ್ಯತೆ ಕೊಡುತ್ತಾ, ರೈತರಿಗೆ ಅವುಗಳನ್ನೇ ಶಿಫಾರಸು ಮಾಡುವ ಕೃಷಿ ವಿಜ್ಞಾನ ಕೇಂದ್ರಗಳೂ ಕೃಷಿ ವಿಶ್ವವಿದ್ಯಾಲಯಗಳೂ ಬಹಳಷ್ಟಿವೆ. ಅದರ ಮಧ್ಯೆಯೇ, ದೇಸಿ ಪ್ರೀತಿಯ ಒಂದಷ್ಟು ಕೃಷಿ ವಿಜ್ಞಾನಿಗಳು ಸಾಂಪ್ರದಾಯಿಕ ತಳಿ ಗುಣಲಕ್ಷಣ ದಾಖಲಿಸುತ್ತ, ತಮ್ಮ ಸೀಮಿತ ಮಟ್ಟದಲ್ಲಿ ದೇಸಿ ಬೀಜೋತ್ಪಾದನೆ ಮಾಡಿ ಆಸಕ್ತ ರೈತರಿಗೆ ವಿತರಿಸುತ್ತಿದ್ದಾರೆ. ಅಂಥ ವಿಜ್ಞಾನಿಗಳನ್ನು ಗುರುತಿಸಿ, ಅವರಿಗೆ ತಳಿಶುದ್ಧತೆ ಕಾಯ್ದುಕೊಳ್ಳುವುದು ಮತ್ತು ಬೀಜೋತ್ಪಾದನೆಯ ಉಸ್ತುವಾರಿ ವಹಿಸಬೇಕು. ಉಳಿದಂತೆ, ಪ್ರಾದೇಶಿಕವಾರು ಬೆಳೆಗಳನ್ನು ನಿಗದಿ ಮಾಡಿ, ಅವುಗಳ ತಳಿ ಸಂರಕ್ಷಣೆ ಹಾಗೂ ಬೀಜೋತ್ಪಾದನೆಯ ಹೊಣೆಯನ್ನು ಬೀಜ ಸಂರಕ್ಷಕರಿಗೆ ವಹಿಸಬೇಕು. ಕೃಷಿ ವಿಶ್ವವಿದ್ಯಾಲಯ ಮಟ್ಟದಲ್ಲಿ ದೇಸಿ ತಳಿಗಳ ವೈಶಿಷ್ಟ್ಯ ದಾಖಲಿಸುವ ಕೆಲಸ ನಡೆಯಬೇಕು.



ಒಡಿಶಾ, ಜಾರ್ಖಂಡ್, ಆಂಧ್ರಪ್ರದೇಶ ಸರ್ಕಾರಗಳು ವೈವಿಧ್ಯಮಯ ಯೋಜನೆಗಳ ಮೂಲಕ ನೈಸರ್ಗಿಕ ಕೃಷಿ ಹಾಗೂ ದೇಸಿ ಬೀಜ ಸಂರಕ್ಷಣೆಗೆ ಪ್ರೋತ್ಸಾಹ ಕೊಡುವಲ್ಲಿ ಮುಂಚೂಣಿಯಲ್ಲಿ ಕಾಣುತ್ತಿವೆ. ಉತ್ತಮ ದೇಸಿ ತಳಿಗಳ ಬಿಡುಗಡೆ, ಸಿರಿಧಾನ್ಯ ಕೃಷಿ, ಗೆಡ್ಡೆ-ಗೆಣಸು, ಮರೆತ ಆಹಾರ ಪದಾರ್ಥಗಳನ್ನು ಮುಂಚೂಣಿಗೆ ತರುವ ಪ್ರಯತ್ನಕ್ಕಾಗಿ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಮೀಸಲಿಟ್ಟಿವೆ. ಆದರೆ ಇಂಥ ಗಟ್ಟಿ ಪ್ರಯತ್ನಗಳಲ್ಲಿದೇ ಕರ್ನಾಟಕದಲ್ಲಿ ಬರೀ ಅಂತರರಾಷ್ಟ್ರೀಯ ವಹಿವಾಟು ಮೇಳಗಳಷ್ಟೇ ನಡೆಯುತ್ತಿವೆ.

ಪ್ರಾಕೃತಿಕ ವಿಕೋಪದಿಂದ ಬಸವಳಿದ ರೈತ ಸಮುದಾಯಕ್ಕೆ ಅಲ್ಪವಾದರೂ ಪರಿಹಾರ ದೇಸಿ ತಳಿಗಳಲ್ಲಿದೆ. ಆದರೆ ಅದಕ್ಕೊಂದು ವ್ಯವಸ್ಥಿತ ಚೌಕಟ್ಟು ಬೇಕಷ್ಟೇ. ಹಾಗೆ ನೋಡಿದರೆ, ಸಾವಯವ ಕೃಷಿ ನೀತಿಯನ್ನು ದೇಶದಲ್ಲೇ ಮೊದಲ ಬಾರಿಗೆ ಪ್ರಕಟಿಸಲಾದ ಕರ್ನಾಟಕಕ್ಕೆ, ಬೀಜ ಬ್ಯಾಂಕ್ ಸ್ಥಾಪನೆಯಂಥ ವಿಶಿಷ್ಟ ಪ್ರಯೋಗಗಳು ಮತ್ತಷ್ಟು ಆತ್ಮವಿಶ್ವಾಸ ಕೊಡಬಲ್ಲವು.

Prajavani pg 06

• ಕೃಷಿ ವಿಶ್ವವಿದ್ಯಾಲಯ: 38ನೇ ಭಾರತೀಯ ಕೃಷಿ ಮಾರುಕಟ್ಟೆ ಸಂಸ್ಥೆಯ ವಾರ್ಷಿಕ ಸಮ್ಮೇಳನ. ಮುಖ್ಯ ಅತಿಥಿಗಳು: ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಅಶೋಕ್ ದಳವಾಯಿ, ಶಾಸಕ ಶರತ್ ಬಚ್ಚೇಗೌಡ, ಸ್ಥಳ: ನಾರ್ತ್ ಬ್ಲಾಕ್ ಸಭಾಂಗಣ, ಕೃಷಿ ವಿವಿ, ಜಿಕೆವಿಕೆ. ಬೆಳಗ್ಗೆ 10ಕ್ಕೆ.

Udayavani pg 03

V-karnataka pg 10

ಕೊಬ್ಬರಿಗೆ ಹೆಚ್ಚಿದ ಬೆಲೆ

(ಹಾಸನ ವರದಿ): ಸಂಕ್ರಾಂತಿ ಹಬ್ಬದಿಂದಾಗಿ ಕೊಬ್ಬರಿಗೆ ಬೇಡಿಕೆ ಹೆಚ್ಚಾಗಿದೆ. ಆದರೆ, ನಿರೀಕ್ಷಿತ ಇಳುವರಿ ಇಲ್ಲದೆ ಇರುವುದರಿಂದ ತೆಂಗಿನಕಾಯಿ ಹಾಗೂ ಕೊಬ್ಬರಿ ಬೆಲೆಯಲ್ಲಿ ಏರಿಕೆಯಾಗಿದೆ.

ಒಂದು ವರ್ಷದಿಂದ ಕ್ವಿಂಟಲ್‌ಗೆ ₹8ಸಾವಿರದಿಂದ ₹8,500 ಇದ್ದ ಕೊಬ್ಬರಿ ಬೆಲೆ ಈಗ ₹14,660ರಿಂದ ₹15 ಸಾವಿರಕ್ಕೆ ಮುಟ್ಟಿದೆ. ಕೊಬ್ಬರಿ ಕೆ.ಜಿ.ಗೆ ₹240 ಏರಿಕೆಯಾಗಿದ್ದರೆ, ದೊಡ್ಡಗಾತ್ರದ ತೆಂಗಿನಕಾಯಿ-ಯೊಂದಕ್ಕೆ ₹40 ರಿಂದ ₹45 ದರವಿದೆ. ಒಂದು ಎಳನೀರು ದರ ₹50 ದಾಟಿದೆ.

ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ, ಬೇಲೂರು, ಹಾಸನ ತಾಲ್ಲೂಕಿನ 1.18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. 2023-24ರಲ್ಲಿ ಮಳೆ ಕೊರತೆಯಿಂದಾಗಿ ಇಳುವರಿ ಕಡಿಮೆಯಾಗಿದೆ.

'ಕಾಯಿ ಕೀಳಿಸುವ, ಸುಲಿಸುವ ಜಂಜಾಡವೇ ಬೇಡ ಎಂದು ಬೆಳೆಗಾರರು ಎಳನೀರು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಮಾರುಕಟ್ಟೆಯಲ್ಲಿನ ಬೇಡಿಕೆಗೆ ತಕ್ಕಂತೆ ತೆಂಗಿನಕಾಯಿ ಹಾಗೂ ಕೊಬ್ಬರಿ ಸಿಗುತ್ತಿಲ್ಲ' ಎನ್ನುತ್ತಾರೆ ವರ್ತಕರು.



ಅರಸೀಕೆರೆಯ ಮಾರುಕಟ್ಟೆಯಿಂದ ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯಪ್ರದೇಶ, ಜಮ್ಮು-ಕಾಶ್ಮೀರ, ಬಿಹಾರ, ಉತ್ತರಾಂಚಲ ಮತ್ತು ಮಹಾರಾಷ್ಟ್ರಕ್ಕೆ ಕೊಬ್ಬರಿ ರವಾನೆಯಾಗುತ್ತದೆ. ಈ ಕೊಬ್ಬರಿಯನ್ನು ಪ್ರಮುಖವಾಗಿ ಸಿಹಿತಿಂಡಿ ಮತ್ತು ಅಡುಗೆಗೆ ಬಳಸುತ್ತಾರೆ. ಉಂಡೆ ಕೊಬ್ಬರಿ ಬೆಲೆಯು ಏರಿಳಿತವು ಉತ್ತರ ಭಾರತದಲ್ಲಿ ನಡೆಯುವ ಹಬ್ಬ, ಮದುವೆ ಋತು ಮತ್ತು ಹವಾಗುಣದ ಮೇಲೆ ಅವಲಂಬಿತವಾಗಿದೆ.

ಬೇಸಿಗೆ ಆರಂಭವಾಗುತ್ತಿದೆ. ಇದರಿಂದ ಮುಂಬೈ ಮಾರುಕಟ್ಟೆಯಲ್ಲಿ ಎಳನೀರಿಗೆ ಬೇಡಿಕೆ ಹೆಚ್ಚಾಗಿದೆ. ಅಲ್ಲಿ ಎಳನೀರು ಒಂದಕ್ಕೆ ₹100 ಇದೆ. ಜಿಲ್ಲೆಯಿಂದ ವಾರಕ್ಕೆ 20ರಿಂದ 25 ಲೋಡ್ ಎಳನೀರು ರವಾನೆ ಮಾಡಲಾಗುತ್ತಿದೆ.

ಹಬ್ಬಗಳಿರುವುದರಿಂದ ಸದ್ಯಕ್ಕೆ ಬೆಲೆ ಹೆಚ್ಚಳವಾಗಿದೆ. ಸಂಕ್ರಾಂತಿ ನಂತರ ಹೆಚ್ಚಿನ ಕೊಬ್ಬರಿ ದಾಸ್ತಾನು ಬಂದರೆ ಬೆಲೆ ಕಡಿಮೆಯಾಗಬಹುದು
ಸಿದ್ದಲಿಂಗಸ್ವಾಮಿ,
ಕಾರ್ಯದರ್ಶಿ, ಅರಸೀಕೆರೆ ಎಪಿಎಂಸಿ

ಈ ಬಾರಿ ತಮಿಳುನಾಡು, ಕೇರಳದಲ್ಲಿಯೂ ಕೊಬ್ಬರಿ ಉತ್ಪಾದನೆ ಕಡಿಮೆಯಾಗಿದ್ದು, ಉತ್ತರ ಭಾರತದಲ್ಲಿ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ಉತ್ತಮ ಬೆಲೆ ಬಂದಿದೆ
ಮಂಗಳಾ,
ಉಪ ನಿರ್ದೇಶಕಿ, ತೋಟಗಾರಿಕೆ ಇಲಾಖೆ

ದಶಕದಲ್ಲೇ ದುಬಾರಿ ದರ

(ಮದ್ದೂರು/ ಮಂಡ್ಯ ವರದಿ): ತೆಂಗಿನ ಮರಗಳಿಗೆ ರೋಗ ಬಾಧೆ ಹಾಗೂ ಬರದ ಭಾಯೆಯಿಂದ ತೆಂಗಿನಕಾಯಿ ಬೆಲೆ ಗಗನಕ್ಕೇರಿದ್ದು, ಈ ಬಾರಿ 10 ವರ್ಷಗಳಲ್ಲೇ ಹೆಚ್ಚು ದುಬಾರಿಯಾಗಿದೆ. ಬೇಸಿಗೆಗೆ ಮುನ್ನವೇ ದರ ಹೆಚ್ಚಿದ್ದು, ಗ್ರಾಹಕರಿಗೆ ಹೊರೆಯಾಗಿದೆ.

ಜಿಲ್ಲೆಯ ಹಲವೆಡೆ ಸಂತೆಗೆ ಬರುತ್ತಿದ್ದ ತೆಂಗಿನಕಾಯಿಗಳ ಪೂರೈಕೆ ಕಡಿಮೆಯಾಗಿದೆ. ಮದ್ದೂರು ತಾಲ್ಲೂಕಿನ ಮೈಸೂರು- ಬೆಂಗಳೂರು ಹೆದ್ದಾರಿ ಬಳಿಯಿರುವ 400 ವರ್ಷಕ್ಕೂ ಹೆಚ್ಚು ಇತಿಹಾಸವಿರುವ ತೆಂಗಿನಕಾಯಿ ಮಾರುಕಟ್ಟೆಯಲ್ಲಿನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ.

ಬೆಂಗಳೂರು, ಮೈಸೂರು, ರಾಮನಗರ ಹಾಗೂ ಹೊರರಾಜ್ಯಗಳಾದ ತಮಿಳುನಾಡು, ಕೇರಳದಿಂದಲೂ ತೆಂಗಿನಕಾಯಿ ಖರೀದಿಸಲು ಇಲ್ಲಿಗೆ ವ್ಯಾಪಾರಿಗಳು ಬರುತ್ತಾರೆ. ಈ ಬಾರಿ ಪ್ರತಿ ಕೆ.ಜಿ ತೆಂಗಿನಕಾಯಿ ದರ ₹53 ರಿಂದ ₹55 ಇದೆ. ಒಂದು ದಪ್ಪ ತೆಂಗಿನಕಾಯಿಗೆ ಸುಮಾರು ₹30 ದರವಿದೆ. 'ಎರಡು ವರ್ಷ ಮಳೆ ಕಡಿಮೆಯಾಗಿ ತೆಂಗಿನಮರಗಳು ಒಣಗಿದ್ದವು. ಕಪ್ಪುತಲೆ ಹುಳುವಿನ ಬಾಧೆಯಿಂದ ಇಳುವರಿ ಕುಸಿದಿರುವುದೇ ಬೆಲೆ ಏರಿಕೆಗೆ ಕಾರಣ' ಎನ್ನುತ್ತಾರೆ ರೈತ ನಿಡಘಟ್ಟ ಪ್ರಕಾಶ್.



ಮದ್ದೂರು ತಾಲ್ಲೂಕಿನ ನಿಡಘಟ್ಟ ಗ್ರಾಮದಲ್ಲಿ ಬುಧವಾರ ನಡೆದ ಸಂತೆಯಲ್ಲಿ ತೆಂಗಿನಕಾಯಿಗಳನ್ನು ರಾಶಿ ಹಾಕಲಾಗಿತ್ತು

'ಕಳೆದ 7-8 ತಿಂಗಳ ಅವಧಿಯಲ್ಲಿ ಮದ್ದೂರಿನ ಎಳನೀರು ಮಾರುಕಟ್ಟೆಯಲ್ಲಿ ಧಾರಣೆ ಹೆಚ್ಚಾಗಿತ್ತು. ಮಂಡ್ಯ ಜಿಲ್ಲೆಯ ಬಹುತೇಕ ರೈತರು ಎಳನೀರು ಮಾರಿದ್ದರಿಂದ ಈಗ ತೆಂಗಿನಕಾಯಿಯ ಕೊರತೆ ಉಂಟಾಗಿದೆ' ಎಂದು ವ್ಯಾಪಾರಿಗಳು ಹೇಳುತ್ತಾರೆ.

'ತೆಂಗು ಉತ್ಪಾದನೆ ಕುಸಿತ: ಉತ್ತರ ಭಾರತದಲ್ಲಿ ಕಾಯಿ ಪೌಡರ್‌ಗೆ ಬೇಡಿಕೆ ಹೆಚ್ಚಳ

ಗಗನಕ್ಕೇರಿದ ತೆಂಗಿನಕಾಯಿ ಧಾರಣೆ

ಪ್ರಜಾವಾಣಿ ವಾರ್ತೆ

ತುಮಕೂರು: ದಿನದಿಂದ ದಿನಕ್ಕೆ ತೆಂಗಿನಕಾಯಿಗೆ ಬೇಡಿಕೆ ಹೆಚ್ಚುತ್ತಿದ್ದು, ರೈತರಿಗೆ ಉತ್ತಮ ಬೆಲೆ ಸಿಗುತ್ತಿದೆ. ಮುಂದಿನ ಬೇಸಿಗೆ ಹೊತ್ತಿಗೆ ದರ ಮತ್ತಷ್ಟು ಮುನ್ನಾಯಾಗಲಿದೆ ಎಂದು ವರ್ತಕರು ಹೇಳುತ್ತಾರೆ.

ತೆಂಗಿನಕಾಯಿಗಳ ಗಾತ್ರಕ್ಕೆ ಅನುಗುಣವಾಗಿ ಮಾರುಕಟ್ಟೆಯಲ್ಲಿ ಬೆಲೆ ನಿಗದಿಯಾಗುತ್ತಿದೆ. ಸಣ್ಣ ಗಾತ್ರದ ಕಾಯಿ ₹20-₹22ಕ್ಕೆ ಮಾರಾಟವಾಗುತ್ತಿದ್ದರೆ, ಮಧ್ಯಮ ಗಾತ್ರ ₹25, ದೊಡ್ಡ ಗಾತ್ರದ ಕಾಯಿಗೆ ₹30ರ ವರೆಗೂ ಬೆಲೆ ಸಿಗುತ್ತಿದೆ. ಸಂತೆಗಳಲ್ಲಿ ಕೆ.ಜಿ ಲೆಕ್ಕದಲ್ಲೂ ಖರೀದಿಸುತ್ತಿದ್ದು, ಕೆ.ಜಿ ₹57-₹60ರ ವರೆಗೂ ಏರಿಕೆಯಾಗಿದೆ.

ಬೆಲೆಯಲ್ಲಿ 2.24 ಲಕ್ಷ ಹೆಕ್ಟೇರ್‌ನಲ್ಲಿ ತೆಂಗು ಬೆಳೆಯಲಾಗುತ್ತಿದೆ. ಬರ, ರೋಗಬಾಧೆ, ಹವಾಮಾನ ವೈಪರೀತ್ಯದಿಂದಾಗಿ ಇಳುವರಿ ಕಡಿಮೆಯಾಗಿದೆ.

2023ರಲ್ಲಿ ಕೀಟ ಬರದಿಂದ ರೈತರು ಮರಗಳನ್ನು ಉಳಿಸಿಕೊಳ್ಳುವುದೇ ಕಷ್ಟಕರವಾಗಿತ್ತು. ಕಳೆದ ವರ್ಷ ಉತ್ತಮ ಮಳೆಯಾಗಿದ್ದರೂ ಮರಗಳು ಇನ್ನೂ ಚೇತರಿಸಿಕೊಂಡಿಲ್ಲ. ಎಳನೀರಿಗೆ ಉತ್ತಮ ಬೆಲೆ ಸಿಗುತ್ತಿರುವುದರಿಂದ ಸಾಕಷ್ಟು ರೈತರು ಎಳನೀರು ಮಾರಾಟ ಮಾಡುತ್ತಿದ್ದಾರೆ. ತೆಂಗಿನ ಉಪ ಉತ್ಪನ್ನಗಳ ತಯಾರಿಕೆ ಮತ್ತು ಬಳಕೆಯೂ ಹೆಚ್ಚಾಗಿದೆ. ಇದು ಕೂಡ ಬೆಲೆ ಏರಿಕೆಗೆ ಕಾರಣವಾಗಿದೆ.

ಹಿಂದಿನ ವರ್ಷಗಳಲ್ಲಿ ಕೊಬ್ಬರಿ ಬೆಲೆ ಕ್ವಿಂಟಲ್‌ಗೆ ₹10 ಸಾವಿರಕ್ಕಿಂತ ಕಡಿಮೆ ಇತ್ತು. ಬೆಲೆ ಕುಸಿತದಿಂದ ಕಂಗಾಲಾದವರು ತೆಂಗಿನಮರಗಳ ಜಾಗದಲ್ಲಿ ಅಡಿಕೆ ಸಸಿಗಳನ್ನು ನೆಟ್ಟಿದ್ದಾರೆ. ಇಂತಹ ಹಲವು ಕಾರಣಗಳಿಂದ ತೆಂಗಿನ ಉತ್ಪಾದನೆ ಕುಸಿಯುತ್ತಲೇ ಸಾಗಿದ್ದು, ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ ವ್ಯಾಪಾರಿಗಳು ಹೇಳುತ್ತಾರೆ.

ಪಶ್ಚಿಮ ಬಂಗಾಳ ಸೇರಿ ಉತ್ತರ ಭಾರತದಲ್ಲಿ ಉಂಡೆ ಕೊಬ್ಬರಿ ಬದಲಿಗೆ ಕಾಯಿ ಪೌಡರ್ ಬಳಕೆ ಹೆಚ್ಚಾಗಿದೆ. ತಮಿಳುನಾಡಿನಲ್ಲೂ ಉತ್ಪಾದನೆ ತಗ್ಗಿದ್ದು, ಆ ರಾಜ್ಯದ ಕಾಯಿಯು ಸಂಕ್ರಾಂತಿ ನಂತರ ಮಾರುಕಟ್ಟೆಗೆ ಬರಲಿದೆ. ಇದರಿಂದಾಗಿ ಬೆಲೆಯು ಕಾಯಿಗೆ ಬೇಡಿಕೆ ಬಂದಿದೆ ಎಂದು ವಿವರಿಸುತ್ತಾರೆ.



ಕಳೆದ ವರ್ಷ ತೆಂಗಿನ ಮರಗಳು ಚೇತರಿಕೆ ಕಾಣದಷ್ಟು ದಿಟಸು

ಕಾಡಿತ್ತು. ಇದನ್ನು ಮೋಡಲಾಗದ ಹಲವು ರೈತರು ಮರಗಳನ್ನು ಕಡಿದು ಹಾಕಿ ಅಡಿಕೆ ಸಸಿ ನೆಟ್ಟಿದ್ದಾರೆ
ವೆಂಕಟೇಶ್, ರೈತ, ಬಾಗೂರು, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

ರೈತರಿಗೆ ದಕ್ಕಿದ ಲಾಭ

ಕಡೂರು ವರದಿ (ಚಿಕ್ಕಮಗಳೂರು ಜಿಲ್ಲೆ): ಇಲ್ಲಿನ ಎಪಿಎಂಸಿ ಕಾಯಿ ಸಂತೆಯಲ್ಲಿ ಒಂದು ಸಾವಿರ ಉತ್ಪನ್ನ ಗುಣಮಟ್ಟದ ತೆಂಗಿನಕಾಯಿಗೆ ₹26 ಸಾವಿರ ದರವಿದೆ. ಮಧ್ಯಮ ಗಾತ್ರದ ಕಾಯಿಗೆ ₹18 ಸಾವಿರ ಹಾಗೂ ಚಿಕ್ಕ ಗಾತ್ರದ ಕಾಯಿಗೆ ₹12 ಸಾವಿರದಿಂದ ₹15 ಸಾವಿರ ಬೆಲೆ ಇದೆ.

ಒಂದು ಕ್ವಿಂಟಲ್ ತೆಂಗಿನಕಾಯಿ ₹4,500ರಿಂದ ₹5,500ರ ವರೆಗೆ ಮಾರಾಟವಾಗಿದೆ. ಕೆಲವು ವ್ಯಾಪಾರಿಗಳು ರೈತರ ತೋಟಕ್ಕೆ ಹೋಗಿ 1 ಸಾವಿರ ಕಾಯಿಗೆ ₹20 ಸಾವಿರದಿಂದ ₹24 ಸಾವಿರಕ್ಕೆ ಖರೀದಿಸುತ್ತಿದ್ದಾರೆ. ಸ್ಥಳೀಯವಾಗಿ ಚಿಲ್ಲರೆ ಮಾರುಕಟ್ಟೆಯಲ್ಲಿ ಒಂದು ತೆಂಗಿನಕಾಯಿಗೆ ₹20ರಿಂದ ₹35 ದರವಿದೆ.

ವ್ಯಾಪಾರಿಗಳು ಖರೀದಿಸುವ ಕಾಯಿಯನ್ನು ಮುಂಬೈ, ದೆಹಲಿ, ಪುಣೆಗೆ ಕಳುಹಿಸುತ್ತಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ತೆಂಗಿನಕಾಯಿ ಬೆಲೆ ಹೆಚ್ಚಾಗಿದ್ದು, ಲಾಭ ಸಿಕ್ಕಿದೆ ಎಂದು ರೈತರು ಹೇಳುತ್ತಾರೆ.



ಕೆ.ಜಿಗೆ ₹57 ದರ

(ಚಾಮರಾಜನಗರ ವರದಿ) ಜಿಲ್ಲೆಯಲ್ಲಿ ಬೆಳೆಯುವ ಬಹುಪಾಲು ತೆಂಗಿನಕಾಯಿ ನೆರೆಯ ತಮಿಳುನಾಡು, ಕೇರಳ ರಾಜ್ಯ ಹಾಗೂ ಬೆಂಗಳೂರಿಗೆ ಹೆಚ್ಚಾಗಿ ಪೂರೈಕೆಯಾಗುತ್ತದೆ.

ಸದ್ಯ ಇಲ್ಲಿನ ಚಿಲ್ಲರೆ ಮಾರುಕ

IDEATE, INNOVATE, IMPLEMENT

A Ground-breaking Irrigation Technique, Solar-powered Organic Farming, And Lending An Entrepreneurial Edge To Millet Cultivation — **Krishnendu Bandyopadhyay** Brings Success Stories From Rural West Bengal

MAKING FARMING SUSTAINABLE...



WATER WEALTH: Bengal farmer Maya Khan has revolutionised paddy cultivation with water-saving technique, boosting yields & cutting costs thanks to the NGO

WATER SAVINGS WITH AWD:

Traditional method	2-3 floodings per 10 days
AWD method	1 flooding per 10 days
Water usage reduction	25-30%

COST COMPARISON:

Traditional irrigation	1,000 per bigha
AWD irrigation	700-600 per bigha

ENVIRONMENTAL IMPACT:

Methane emissions reduction	48%

In the heart of West Bengal's agricultural landscape, at Simurali village in the arid Bankura district, Maya Khan is leading a quiet revolution. On her two bighas (one bigha is a measure between 1/3 acre and one acre) of paddy field, Maya has embraced a ground-breaking irrigation method known as Alternate Wetting and Drying (AWD), marking a significant departure from traditional farming practices.

AWD is a sustainable paddy cultivation technique that has gained global recognition for its effectiveness in conserving water, reducing labour cost, and cutting down greenhouse gas emissions, introduced to Maya by SwitchON Foundation. Unlike traditional, continuous flooding methods, AWD involves periodically drying and re-flooding rice fields, allowing for better resource management.

Maya was initially hesitant to adopt AWD, but after learning about its benefits, she decided to give it a try. The method involves using a 30 cm-long, 10 cm-wide water pipe with holes along 15 cm of its length. The perforated section is inserted into the ground, allowing Maya to monitor soil moisture and determine the optimal time for re-flooding the field.

"Earlier, the cost of irrigation per bigha was Rs 1,000. After adopting AWD, the cost has come down to Rs 700-600. Moreover, the yield of rice has increased by 20%," Maya shared.

The success of Maya and other farmers in the region is largely attributed to the efforts of the SwitchON Foundation, an organisation that has been instrumental in promoting AWD through stakeholder meetings, training sessions, hands-on demonstrations, and installation of 700 water pipes across West Bengal to support AWD implementation. It has also trained 203 farmers on AWD techniques.

With AWD, SwitchON Foundation has empowered farmers to adopt climate-smart agricultural practices, leading to enhanced food security and environmental sustainability.

Maya's success with AWD is a testament to the potential of innovative farming techniques in transforming agriculture.

LOST TO LEADING: THE SOLAR TRANSFORMATION



POWER SWITCH: Alok Mallick turned adversity into opportunity by adopting solar power. He's since transformed from a reluctant farmer into an agricultural innovator

CHANGE Begins Here

At Jatrapur village in West Bengal's Nadia district, technology was once a far-off dream for most farmers. The idea of accessing advanced farming tools or benefiting from govt-sponsored schemes seemed unattainable.

However, winds of change swept through this rural community when a young farmer named Alok Mallick embraced solar energy, forever altering his approach to farming and his outlook on life.

Alok, 32, war never interested in farming. However, after passing his class 10 final exams, he was forced to discontinue with his studies and take up farming instead, following the untimely death of his father that left him to shoulder the responsibility of caring for his mother, younger sister – and their 3.5-acre farmland.

Alok's initial attempts at farming were fraught with difficulties. His knowledge was limited, and their small pond was inadequate to address their irrigation needs.

Just when Alok was at his lowest, representatives from SwitchON Foundation visited Jatrapur to meet local farmers. They offered training on organic farming and solar technology, introducing Alok and his fellow villagers to the concept of solar pumps and the subsidies available under the PM Kusum Yojana.

A year on, Alok now cultivates multiple crops, and not just during the monsoon. He has also revived his pond and ventured into fish farming, adding a new revenue stream to his farming operations.

The solar pump, unlike its diesel counterpart, is easy and safe to operate, allowing even Alok's wife to manage the equipment in his absence.

Thanks to SwitchON Foundation, Alok has come to know about the environmental advantages of solar energy and has since encouraged other farmers in his village to make the switch to solar farming.

Solar pumps installed in Bengal by SwitchON	200+
Districts covered	14
Land covered	1,500 acres
Beneficiaries	Over 5,000 farmers

JOURNEY OF THE 'MILLETPRENEUR'



MILLET MAVERICK: Dipali Mahato transforms into successful 'milletpreneur,' running a café and inspiring rural women through sustainable agriculture

Dipali Mahato, a 34-year-old resident of Kusum Juria village in Hura block, Purulia district, has seen herself transformed from being a humble farmer to a successful 'milletpreneur'. Her inspiring journey towards sustainable agriculture, particularly in millet cultivation, has been majorly supported by SwitchON Foundation, which played a pivotal role in mobilising farmers, helping raise awareness on benefits of millet farming, and providing the essential tools and knowledge that helped Dipali and many others like her embrace this nutritious and climate-resilient crop.

MILLET REVIVAL IN PURULIA AND BANKURA:

Farmers engaged	500+
Land cultivated	150 acres
Community impact	100+ women farmers have adopted millet cultivation

Dipali's transformation began with her active participation in focus group discussions (FGDs) and state and district-level workshops organised by SwitchON Foundation. These sessions deepened her understanding of millet cultivation and its numerous benefits.

SwitchON Foundation further assisted by ensuring access to quality seeds, enabling Dipali to start her millet cultivation journey on 0.35 acre land. Her initial harvest during the Kharif season yielded 37 kg of millet.

Recognising Dipali's passion for cooking, SwitchON Foundation trained her on millet cooking, helping expand her repertoire of millet-based recipes.

Collaborative efforts of Anandadhara Prakalpa by WBSRLM and SwitchON Foundation culminated in the inauguration of a Millet Café in Hura block. Here, Dipali took on a leading role, actively engaging in food preparation and management.

Encouraged by her achievements, more women are now eager to participate in training programmes, adopt millet farming practices, and explore entrepreneurial opportunities within their own communities.

"I am excited to prepare and serve different millet recipes such as millet laddoo, kheer, fritters, malpua, khichdi, and many more," Dipali said with joy.

Dipali's journey is a powerful reminder of how targeted interventions, skill development, and community support can transform livelihoods and empower rural women.

Times of Ind Pg 10

Hosadiganta Pg 07

ಸಕಾಲಿಕ ಮಳೆಯಿಂದ ಮೇವಿಗಿಲ್ಲ ಕೊರತೆ | ಆರ್ಥಿಕ ನಷ್ಟದ ಹಾದಿಯಲ್ಲಿರುವ ರೈತರು

ಒಣ ಹುಲ್ಲನ್ನು ಕೇಳುವವರೇ ಇಲ್ಲ?

▸ ತಾವರೆಕೆರೆ ಟಿ.ನಾಗರಾಜ್

ತಾವರೆಕೆರೆ: ಮುಂಗಾರು- ಹಿಂಗಾರು ಮಳೆಯಿಂದಾಗಿ ರಾಗಿ ಬೆಳೆ ಉತ್ತಮವಾಗಿ ಬಂದಿದೆ. ಈಗ ಒಕ್ಕಣೆ ಸಮಯ ಮುಗಿದಿದೆ. ಒಕ್ಕಣೆ ಬಳಿಕ ರಾಗಿ ಹುಲ್ಲನ್ನು ಮೆದೆ ಹಾಕಲಾಗಿದೆ. ಮೇವು ಸಾಕಷ್ಟು ಇರುವುದರಿಂದ ಕೊರತೆ ಕಾಣುತ್ತಿಲ್ಲ. ಅಲ್ಲಲ್ಲಿ ಮಳೆ ಬಿದ್ದ ಪರಿಣಾಮ ಬೆಳೆ ಜತೆಗೆ ಹಸಿರು ಹುಲ್ಲು ಕೂಡ ಬೇಕಾದಷ್ಟು ಬೆಳೆದಿದೆ. ಆದರೆ ಈ ವರ್ಷ ಮೇವಿನ ಕೊರತೆ ಕಂಡು ಬಂದಿರುವುದಿಲ್ಲ. ಆದರೆ, ತುಂತುರು ಮಳೆಯ ಜೊತೆಗೆ ಅತಿ ಶೀತ ಗಾಳಿಯಿಂದಾಗಿ ಗ್ರಾಮೀಣ ಭಾಗದಲ್ಲಿ ಅವರೇ, ಜೋಳ, ಅಲಸಂದಿ, ತೊಗರಿ, ಸಾಲುಗಳಲ್ಲಿ ಹಾಕಿ ರಾಗಿ ಬೆಳೆ ಅತಿ ಹೆಚ್ಚಾಗಿ ಬೆಳೆಯಲಾಗಿದೆ. ಇದರಿಂದ ಅತಿ ಹುಲುಸಾಗಿ ರಾಗಿ ಬೆಳೆ ಜೊತೆಗೆ ಇದರ ಹುಲ್ಲು ಅತಿ ಹೆಚ್ಚಾಗಿದೆ.

ಹೈನುಗಾರಿಕೆಯಲ್ಲಿ ಚೇತರಿಕೆ: ರಾಸುಗಳಿಗೆ ಮೇವಿನ ಕೊರತೆಯಿಲ್ಲದೆ ಅತಿ ಹೆಚ್ಚಾಗಿ ಹಾಲು ಕೊಡುತ್ತಿವೆ. ಇದರಿಂದ ಹೈನುಗಾರಿಕೆಯಲ್ಲಿಯೂ ಸಹ ಚೇತರಿಕೆ ಕಂಡು ಬಂದಿದೆ. ಹಿಂದಿನ ವರ್ಷದಲ್ಲಿ ಡಿಸೆಂಬರ್ ಹಾಗೂ ಜನವರಿ ತಿಂಗಳಲ್ಲಿ ಹಾಲಿನ ಉತ್ಪಾದನೆ ಕಡಿಮೆಯಾಗಿತ್ತು. ಆದರೆ,೦ ಈಗ ತಾಲೂಕಿನಲ್ಲಿಯೇ ಅತಿ ಹೆಚ್ಚಾಗಿ ಹಾಲು ಉತ್ಪಾದನೆಯಾಗಿ ಹಾಲಿನ ಕೊರತೆ ನೀಗಿದಂತಾಗಿದೆ.

ಒಣ ಹುಲ್ಲಿನ ಬೆಲೆ ಇಳಿಕೆ: ಆದರೆ, ಇದರ ಎಲ್ಲದರ ಮಧ್ಯೆ ಒಣ ಹುಲ್ಲಿನ ಕಟ್ಟಿಗೆ ಕಳೆದ ವರ್ಷ ಬರದ ವಾತಾವರಣ ನಿರ್ಮಾಣವಾದ ಹಿನ್ನೆಲೆ 400 ರೂ ರಿಂದ 500ರೂ. ಗಳತ್ತು. ಆದರೆ ಈಗ 200ರೂ ರಿಂದ 250ರೂ. ಗಳಾಗಿದೆ. ಉತ್ತಮ ಬೆಳೆಯಾದರೂ ಸಹ ಒಣ ಹುಲ್ಲಿಗೆ ಹಣ ಸರಿಯಾಗಿ ಸಿಗದ ಕಾರಣ ರೈತರು ತಲೆಯ ಮೇಲೆ



ಕೈ ಇಟ್ಟುಕೊಂಡಿದ್ದಾರೆ.

ಹುಲ್ಲಿಗೆ ಸೂಕ್ತ ಮಾರುಕಟ್ಟೆ ಇಲ್ಲ: ರೈತರು ಪ್ರತಿನಿತ್ಯ ಜಾನುವಾರುಗಳಿಗೆ ಒಂದರಿಂದ ಮೂರು ಕಟ್ಟು ಹುಲ್ಲಿನ ಅಗತ್ಯವಿದೆ. ಆದರೆ ಇದಕ್ಕಿಂತ ಹೆಚ್ಚಾಗಿ ರಾಗಿ ಬೆಳೆಯಾಗಿದೆ. ಉಳಿದ ಹುಲ್ಲನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಸರಿಯಾದ ದರ ಸಿಗುತ್ತಿಲ್ಲ. ಈ ವರ್ಷ ಫೆಂಗಾನ್ ಮಳೆಯಿಂದ ವರ್ಷದ ಕೊನೆಯವರೆಗೂ ಮಳೆಯಾದ ಹಿನ್ನೆಲೆ ಹಸಿ ಹುಲ್ಲು ಸಿಗುತ್ತಿದೆ. ಆದ್ದರಿಂದ ಒಣ ಹುಲ್ಲಿನ ಬಳಕೆ ಕಡಿಮೆ ಪ್ರಮಾಣದಲ್ಲಿ ಬಳಕೆಯಾಗುತ್ತಿದೆ. ಇದರಿಂದ ಒಂದು ರೀತಿ ರೈತರಿಗೆ ಲಾಭವಾದರೆ ಮತ್ತೊಂದೆಡೆ ನಷ್ಟ ಅನುಭವಿಸುವಂತಾಗಿದೆ. ರಾಗಿ ಬೆಳೆದ ರೈತರು ಹುಲ್ಲಿನ ದರ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಹುಲ್ಲು ಮಾರಟ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ರಾಗಿಗೆ ಉತ್ತಮ ದರ ಸಿಗುತ್ತಿದ್ದು ಒಣ ಹುಲ್ಲಿಗೆ ದರವಿಲ್ಲದೆ ಪರದಾಡುವಂತಾಗಿದೆ. ಆದರೆ ಜಾನುವಾರು ಸಾಕಣೆ ಮಾಡುವ ರೈತರಿಗೆ ಹುಲ್ಲಿನ ದರ ಇಳಿಕೆಯಾಗಿದೆ.

ದರ ಇಲ್ಲದೆ ರಾಶಿ ಹಾಕಲಾಗಿದೆ

ಕಳೆದ ವರ್ಷಕ್ಕೆ ಹೋಲಿಕೆ ಮಾಡಿದಲ್ಲಿ ಈ ವರ್ಷ ಉತ್ತಮ ಮಳೆಯಾಗಿದೆ. ಹಾಲು ಕರೆಯುವ ರಾಸುಗಳಿಗೆ ಹಸಿ ಹುಲ್ಲು ಕೊಟ್ಟರೆ ಹಾಲು ಉತ್ಪಾದನೆ ಹೆಚ್ಚಾಗುತ್ತದೆ. ಇದರಿಂದಲೂ ಒಣ ಹುಲ್ಲು ರಾಸುಗಳಿಗೆ ಕಡಿಮೆ ಕೊಡುವುದರಿಂದ ದರದಲ್ಲಿ ಕುಸಿತವಾಗಿದೆ. ದರ ಸಿಗದೆ ಹೊಲದಲ್ಲೆ ಒಣ ಹುಲ್ಲು ರಾಶಿ ಹಾಕಲಾಗಿದೆ ಎಂದು ರೈತ ಮುನಿಯಪ್ಪ ಸಿ.ಟಿ.ಗೊಲ್ಲಹಳ್ಳಿ ಹೇಳಿದರು.

ಉತ್ತಮ ಬೇಡಿಕೆ ಇಲ್ಲ

ಎಲ್ಲೆಂದರಲ್ಲಿ ಒಣ ಹುಲ್ಲಿನ ಲಭ್ಯತೆ ಹೆಚ್ಚಾಗಿದೆ. ಇದರ ಜೊತೆಗೆ ಹಸಿ ಹುಲ್ಲು ದೊರೆಯುತ್ತಿದೆ. ಒಣ ಹುಲ್ಲಿಗೆ ದರ ಸರಿಯಾಗಿ ಸಿಗುತ್ತಿಲ್ಲ ಎಂದು ಉಪನಿರ್ದೇಶಕ ಪಶುಪಾಲನಾ ಇಲಾಖೆ ಜಗದೀಶ್ ಹೇಳಿದರು.

ಜಾನುವಾರುಗಳ ಸಂಖ್ಯೆಯೂ ಕಡಿಮೆ: ಇತ್ತೀಚಿಗೆ ಗ್ರಾಮೀಣ ಭಾಗದಲ್ಲಿ ರಾಸುಗಳ ಸಾಕಣೆ ಸಂಖ್ಯೆ ಕಡಿಮೆಯಾಗಿದೆ. ಇದರಿಂದಾಗಿ ಒಣ ಹುಲ್ಲಿಗೆ ಬೇಡಿಕೆ ಇಲ್ಲವಾಗಿದೆ. ಕೆಲವರು ಮಾತ್ರ ರಾಸುಗಳನ್ನು ಸಾಕಿದ್ದಾರೆ. ಬೆಂಗಳೂರು ಗ್ರಾಮಾಂತರಲ್ಲಿ ಆನೇಕ ಕಡೆಯಲ್ಲಿ ಕೈಗಾರಿಕಾ ಪ್ರದೇಶವಾಗಿದೆ. ಇದರಿಂದ ರೈತರು ಜಾನುವಾರುಗಳು ಸಾಕಣೆ ಸಂಖ್ಯೆ ಕೂಡ ಇಳಿಮುಖವಾಗಿದೆ. ಇದರಿಂದಲೂ ಸಹ ಒಣ ಹುಲ್ಲು ಕಡಿಮೆ ಬಳಕೆಯಾಗುತ್ತಿದೆ. ಆದ್ದರಿಂದ ಒಣ ಹುಲ್ಲಿನ ದರದ ಕೊರತೆ ಕೂಡ ಇದೆ.

ದಿಗಂತ ವಿಶೇಷ